## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2019-20ನೇ ಸಾಲಿನ 14ನೇ ಹಣಕಾಸು ಆಯೋಗದ 1ನೇ ಕಂತಿನ ಸಾಮಾನ್ಯ ಮೂಲ ಅನುದಾನ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ:

1. ಭಾರತ ಸರ್ಕಾರದ ಪತ್ರ ಸಂಖ್ಯೆ:13(32) ಎಫ್ಎಫ್‌ಸಿ/ಎಫ್‌ಸಿಡಿ/2015-16, ದಿನಾಂಕ:08-10-2015.
2. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ 75 ಜಿಪಸ 2015, ದಿನಾಂಕ:03-02-2018.
3. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ 02 ಗ್ರಾಪಸ 2019, ದಿನಾಂಕ:21-01-2019.
4. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ 75 ಗ್ರಾಪಸ 2015, ದಿನಾಂಕ:04-02-2019.
5. ಭಾರತ ಸರ್ಕಾರದ ವಿತ್ತ ಮಂತ್ರಾಲಯ, ವೆಚ್ಚ ಇಲಾಖೆ, ಆರ್ಥಿಕ ಆಯೋಗ ವಿಭಾಗದ ಪತ್ರ ಸಂ.ಎಫ್.13(01)/ಎಫ್‌ಸಿಡಿ/2019, ದಿನಾಂಕ:06-06-2019.
6. ಆರ್ಥಿಕ ಇಲಾಖೆಯ ಜಮಾ ದೃಢೀಕರಣ ಪತ್ರ ಸಂಖ್ಯೆ:ಎಫ್‌ಡಿ 20 ಬಿಜಿಎಲ್ 2019, ದಿನಾಂಕ: 12-06-2019.
7. ಆರ್ಥಿಕ ಇಲಾಖೆ(ಆಆಕೋ)ಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 27 ಆಆಕೋ 2015, ದಿನಾಂಕ: 12-06-2019.

ಪ್ರಸ್ತಾವನೆ:

14ನೇ ಹಣಕಾಸು ಆಯೋಗದ ಶಿಫಾರಸ್ಸಿನನ್ವಯ 2015-16ನೇ ಸಾಲಿನಿಂದ 2019-2020ರ ಸಾಲಿನವರೆವಿಗೂ 5 ವರ್ಷದ ಅವಧಿಗೆ ಸಾಮಾನ್ಯ ಮೂಲ ಅನುದಾನ ರೂ.8359.79 ಕೋಟಿಗಳನ್ನು ಭಾರತ ಸರ್ಕಾರವು ನಿಗಧಿಪಡಿಸಿರುತ್ತದೆ.

14ನೇ ಹಣಕಾಸು ಆಯೋಗದ 2019-20ನೇ ಸಾಲಿನ ಸಾಮಾನ್ಯ ಮೂಲ ಅನುದಾನದ (General Basic Grants) ಒಂದನೇ ಕಂತು ರೂ.1251,85,73,000/-(ಒಂದು ಸಾವಿರದ ಎರಡು ನೂರ ಐವತ್ತೊಂದು ಕೋಟಿ ಎಂಬತ್ತೈದು ಲಕ್ಷದ ಎಪ್ಪತ್ಮೂರು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಭಾರತ ಸರ್ಕಾರವು ಮೇಲೆ ಓದಲಾದ(5)ರ. ಪತ್ರದನ್ವಯ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಸಂಪೂರ್ಣವಾಗಿ ಬಿಡುಗಡೆ ಮಾಡಿರುತ್ತದೆ.

ಮೇಲೆ ಓದಲಾದ (6)ರ ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಜಮಾ ದೃಢೀಕರಣ ಪತ್ರದಲ್ಲಿ 2019-20ನೇ ಸಾಲಿನ ಸಾಮಾನ್ಯ ಮೂಲ ಅನುದಾನದ ಒಂದನೇ ಕಂತು ರೂ.1251,85,73,000/-(ಒಂದು ಸಾವಿರದ ಎರಡು ನೂರ ಐವತ್ತೊಂದು ಕೋಟಿ ಎಂಬತ್ತೈದು ಲಕ್ಷದ ಎಪ್ಪತ್ಮೂರು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ರಾಜ್ಯದ ಬೊಕ್ಕಸಕ್ಕೆ ಜಮೆಯಾಗಿರುವ ಕುರಿತು ದೃಢೀಕರಣವನ್ನು ನೀಡಿರುತ್ತದೆ.

ಪ್ರಸ್ತುತ 2019-20ನೇ ಸಾಲಿನ ಆರ್ಥಿಕ ವರ್ಷದ ಆಯವ್ಯಯದಲ್ಲಿ ಗ್ರಾಮ ಪಂಚಾಯತಿಯ ಲೆಕ್ಕ ಶೀರ್ಷಿಕೆ:2515-00-198-6-11-300ರಡಿ ರೂ.250788.00ಲಕ್ಷಗಳನ್ನು ಒದಗಿಸಿರುತ್ತದೆ. ಸದರಿ ಅನುದಾನದಲ್ಲಿ ರೂ.1251,85,73,000/-ಗಳನ್ನು ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಿಗೆ 14ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನದ (General Basic Grants) ಒಂದನೇ ಕಂತಿನ ಅನುದಾನವನ್ನು

ಇಂಟರ್‌ನೆಟ್ ಬ್ಯಾಂಕಿಂಗ್ ಮುಖಾಂತರ ನೇರವಾಗಿ ಸಂಬಂಧಪಟ್ಟ ಬ್ಯಾಂಕು ಖಾತೆಗಳಿಗೆ ಜಮೆ ಮಾಡಲು ಸರ್ಕಾರವು ನಿರ್ಧರಿಸಿರುತ್ತದೆ.

ಆದುದರಿಂದ, ರಾಜ್ಯದಲ್ಲಿನ ಒಟ್ಟು 6021 ಗ್ರಾಮ ಪಂಚಾಯತಿಗಳಿಗೆ 14ನೇ ಹಣಕಾಸು ಆಯೋಗದ ಒಂದನೇ ಕಂತು ರೂ.1251,85,73,000/-(ಒಂದು ಸಾವಿರದ ಎರಡು ನೂರ ಐವತ್ತೊಂದು ಕೋಟಿ ಎಂಬತ್ತೈದು ಲಕ್ಷದ ಎಪ್ಪತ್ತೂರು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಗ್ರಾಮ ಪಂಚಾಯತಿಗಳ ಅಭಿವೃದ್ಧಿ ಕಾರ್ಯಗಳಿಗಾಗಿ ಬಿಡುಗಡೆ ಮಾಡಲು ನಿರ್ಧರಿಸಿದೆ. ಅದರಂತೆ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 03 ಗ್ರಾಪಸ 2019, ದಿನಾಂಕ:13-06-2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 14ನೇ ಹಣಕಾಸು ಆಯೋಗದ ಶಿಫಾರಸ್ಸಿನನ್ವಯ 2019-20ನೇ ಸಾಲಿನ ಒಂದನೇ ಕಂತಿನ ಸಾಮಾನ್ಯ ಮೂಲ ಅನುದಾನವನ್ನು ಭಾರತ ಸರ್ಕಾರವು ರಾಜ್ಯಕ್ಕೆ ಬಿಡುಗಡೆ ಮಾಡಿರುವ ರೂ.1251,85,73,000/-(ಒಂದು ಸಾವಿರದ ಎರಡು ನೂರ ಐವತ್ತೊಂದು ಕೋಟಿ ಎಂಬತ್ತೈದು ಲಕ್ಷದ ಎಪ್ಪತ್ತೂರು ಸಾವಿರ ರೂಪಾಯಿಗಳು ಮಾತ್ರ) (ಅನುಬಂಧದಲ್ಲಿರುವಂತೆ)ಗಳನ್ನು 6021 ಗ್ರಾಮ ಪಂಚಾಯತಿಗಳ ಅಭಿವೃದ್ಧಿ ಕಾರ್ಯಗಳಿಗಾಗಿ ಬಿಡುಗಡೆ ಮಾಡಲು ಆದೇಶಿಸಿದೆ.

ಮೇಲೆ ಓದಲಾದ(2) ಮತ್ತು (4)ರ ಸುತ್ತೋಲೆಗಳ ಮಾರ್ಗಸೂಚಿಗಳಂತೆ ಹಾಗೂ 14ನೇ ಹಣಕಾಸು ಆಯೋಗದ ಶಿಫಾರಸ್ಸಿನನ್ವಯ ಸದರಿ ಅನುದಾನವನ್ನು ಕಡ್ಡಾಯವಾಗಿ ಈ ಕೆಳಕಂಡ ಚಟುವಟಿಕೆಗಳಿಗೆ ಮಾತ್ರ ನಿಯಮಾನುಸಾರ ವಿನಿಯೋಗಿಸಬೇಕಾಗಿರುತ್ತದೆ.

- ನಾಗರೀಕರ ಮೂಲ ಸೇವೆಗಳ ಸ್ಥಿತಿಯನ್ನು ಉತ್ತಮಗೊಳಿಸಲು ನೀರು ಸರಬರಾಜು ಹಾಗೂ ನೈರ್ಮಲ್ಯ.
- ಒಳಚರಂಡಿ ಮತ್ತು ಗಣತ್ಯಾಜ್ಯ ವಸ್ತುಗಳ ನಿರ್ವಹಣೆ.
- ಮಳೆ ನೀರಿನ ಒಳಚರಂಡಿ.
- ಸಮುದಾಯ ಸ್ವತ್ತುಗಳ ನಿರ್ವಹಣೆ.
- ಬೀದಿ ದೀಪಗಳು, ಪಾದಚಾರಿ ಹಾಗೂ ರಸ್ತೆಗಳ ನಿರ್ವಹಣೆ.
- ಸ್ಮಶಾನ ಮತ್ತು ರುದ್ರಭೂಮಿ ನಿರ್ವಹಣೆ.
- ಜೀವ ವೈವಿಧ್ಯತೆ ರಕ್ಷಣೆ.
- ಕಾರ್ಯಚರಣೆ ಮತ್ತು ನಿರ್ವಹಣೆ.

ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ ವರ್ಗದವರ ಕಲ್ಯಾಣಕ್ಕಾಗಿ -ಕನಿಷ್ಠ ಶೇ.25ರಷ್ಟು ಅನುದಾನವನ್ನು ಉಪಯೋಗಿಸಲು ಕಾರ್ಯಕ್ರಮ ರೂಪಿಸುವುದು.

ಸದರಿ ಬಿಡುಗಡೆಗೊಳಿಸಲಾದ ಅನುದಾನದಲ್ಲಿ ಬಾಕಿ ಉಳಿದಿರುವ ವಿದ್ಯುತ್ ಬಿಲ್ಲಿನ ಪಾವತಿಯನ್ನು ಗ್ರಾಮ ಪಂಚಾಯತಿಯವರು ವಿದ್ಯುತ್ ಮಂಡಳಿಯವರಿಗೆ PRIASoft ತಂತ್ರಾಂಶದ ಮೂಲಕ ಕಡ್ಡಾಯವಾಗಿ ಪಾವತಿ ಮಾಡಲು ಕ್ರಮವಹಿಸುವುದು. ವಿದ್ಯುತ್ ಬಿಲ್ಲು ಪಾವತಿ ಮಾಡಿರುವುದನ್ನು ಆಯಾ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ ಆಯಾ ಮುಖ್ಯ ಲೆಕ್ಕಾಧಿಕಾರಿಗಳು ದೃಢೀಕರಿಸಿ, ರಾಜ್ಯ ಸರ್ಕಾರಕ್ಕೆ ಕಡ್ಡಾಯವಾಗಿ ಅನುದಾನ ಬಿಡುಗಡೆಗೊಂಡ ನಂತರ ವರದಿಯನ್ನು ಸಲ್ಲಿಸುವುದು.

ಪಂಚಾಯತ್ ರಾಜ್ ಸಂಸ್ಥೆಗಳಿಗೆ ನೀಡಲಾಗುವ ಹಣವನ್ನು ಸರ್ಕಾರದ ಅಧೀನ ಕಾರ್ಯದರ್ಶಿ(ಜಿಲ್ಲಾ ಪಂಚಾಯತ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ರಾಜ್ಯ ಹುಜೂರ್ ಖಜಾನೆಯಿಂದ ಪೇಯಿಸ್ ರಸೀದಿಯ ಮೇಲೆ ಡ್ರಾ ಮಾಡಿ ನಂತರ ಆರ್.ಟಿ.ಜಿ.ಎಸ್. ಮುಖಾಂತರ 14ನೇ ಹಣಕಾಸು ಆಯೋಗದ ಉಳಿತಾಯ ಖಾತೆ ಸಂಖ್ಯೆ:64207694077 ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿಧಾನಸೌಧ ಶಾಖೆ, ಅಂಬೇಡ್ಕರ್ ವೀದಿ, ಬೆಂಗಳೂರು-560001 (IFSC CODE SBIN0040227) ಇವರಿಗೆ ಬಿಡುಗಡೆಗೊಳಿಸಿ, ನಂತರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಿಂದ ಇಂಟರ್‌ನೆಟ್ ಬ್ಯಾಂಕಿಂಗ್ ಮುಖಾಂತರ ರಾಜ್ಯದ 6021 ಗ್ರಾಮ ಪಂಚಾಯತಿಗಳಿಗೆ ಸರ್ಕಾರವು ನಿಗಧಿಪಡಿಸಿರುವ ಮೊತ್ತದ ಅನುಸಾರ ಬಿಡುಗಡೆ ಮಾಡಲು ಆದೇಶಿಸಿದೆ.

ಅನುದಾನವು ಗ್ರಾಮ ಪಂಚಾಯತಿಗಳಿಗೆ ತಲುಪಿರುವುದನ್ನು ಆಯಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಮುಖ್ಯ ಲೆಕ್ಕಾಧಿಕಾರಿಗಳು ದೃಢೀಕರಿಸಿ ಸರ್ಕಾರಕ್ಕೆ ಸಲ್ಲಿಸುವುದು. ಇದರಲ್ಲಿ ಯಾವುದೇ ಲೋಪವಾದಲ್ಲಿ, ಸಂಬಂಧಪಟ್ಟವರಿಂದ ಬಡ್ಡಿ ವಸೂಲಿ ಮಾಡಲು ಆಯಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಮ ವಹಿಸತಕ್ಕದ್ದು. 2015-16, 2016-17, 2017-18 ಹಾಗೂ 2018-19ನೇ ಸಾಲಿನ ಹಣಬಳಕೆ ಪ್ರಮಾಣ ಪತ್ರವನ್ನು ನಿಗಧಿತ ನಮೂನೆ ಜಿಎಫ್‌ಆರ್-12(ಸಿ) **[(See Rule 239)]**ಯಲ್ಲಿ ಆಯಾ ಗ್ರಾಮ ಪಂಚಾಯತಿಗಳಿಂದ ಪಡೆದು, ಜಿಲ್ಲಾ ಪಂಚಾಯತಿ ಹಂತದಲ್ಲಿ ಕ್ರೋಢೀಕರಿಸಿ ರಾಜ್ಯ ಸರ್ಕಾರಕ್ಕೆ ಕೂಡಲೇ ಕಳುಹಿಸಿಕೊಡಲು ಸೂಚಿಸಿದೆ.

ಈ ಅನುದಾನವನ್ನು ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2019, ದಿನಾಂಕ:03-04-2019ರಲ್ಲಿ ಆದೇಶದನ್ವಯ ಆಯಾ ಇಲಾಖೆಯ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳಿಗೆ ಪ್ರದತ್ತಗೊಳಿಸಲಾಗಿರುವ ಅಧಿಕಾರದನ್ವಯ ಹಾಗೂ ಆರ್ಥಿಕ ಇಲಾಖೆಯ ಆರ್ಥಿಕ ಆಯೋಗ ಕೋಶದ ಟಿಪ್ಪಣಿ ಸಂಖ್ಯೆ: ಆಇ 27 ಆಆಕೋ 2015, ದಿನಾಂಕ:12-06-2019ರನ್ವಯ ಲೆಕ್ಕ ಶೀರ್ಷಿಕೆ:2515-00-198-6-11-300ಯಡಿ 6021 ಗ್ರಾಮ ಪಂಚಾಯತಿಗಳಿಗೆ ಬಿಡುಗಡೆಗೊಳಿಸಲು ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

13/6/2019
(ಪಿ.ದೇವಸಹಾಯಂ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

13.06.19

Under Secretary to Govt. (Z.P.)
RD & PR Dept.
Karnataka Govt. Secretariat

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ ಅಂಡ್ ಎಸ್ ಎಸ್ ಎ), ಕರ್ನಾಟಕ ಹೊಸ ಕಟ್ಟಡ ಪಿ.ಬಿ. ನಂ.5398 ಕರ್ನಾಟಕ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಇ ಅಂಡ್ ಆರ್ ಎಸ್ ಎ), ಕರ್ನಾಟಕ ಸಿ ಬ್ಲಾಕ್, ಹೊಸ ಕಟ್ಟಡ ಪಿ.ಬಿ. ನಂ.5398, ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (ಎ ಅಂಡ್ ಇ), ಕರ್ನಾಟಕ ಸಿ ಬ್ಲಾಕ್, ಹೊಸ ಕಟ್ಟಡ ಪಿ.ಬಿ. ನಂ.5398, ಬೆಂಗಳೂರು.

4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಳುಹಿಸುತ್ತಾ, ಸದರಿ ಅನುದಾನದ ಸಮರ್ಪಕ ಬಳಕೆ ಬಗ್ಗೆ ಸೂಕ್ತ ಮೇಲ್ವಿಚಾರಣೆ ನಡೆಸುವ ವ್ಯವಸ್ಥೆ ಕಲ್ಪಿಸಲು ತಿಳಿಸಿದೆ.
5. ರಾಜ್ಯದ ಮುಖ್ಯ ಲೆಕ್ಕಾಧಿಕಾರಿಗಳಿಗೆ/ಮುಖ್ಯ ಯೋಜನಾಧಿಕಾರಿಗಳಿಗೆ ಕಳುಹಿಸಿದೆ.
6. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ (ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ) ಸದರಿ ಅನುದಾನವನ್ನು ನಿಯಮಾನುಸಾರ ಬಳಕೆ ಮಾಡಲು ತಿಳಿಸಿದೆ.
7. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
8. ಉಪ ನಿರ್ದೇಶಕರು, ಎನ್.ಎಂ.ಸಿ. ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
9. ಕರ್ನಾಟಕ ವಿಕಾಸ/ ವೆಬ್‌ಸೈಟ್.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿಯನ್ನು ಮಾಹಿತಿಗಾಗಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಸರ್ಕಾರದ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು.
4. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಬಿ&ಆರ್) ರವರ ಆಪ್ತ ಕಾರ್ಯದರ್ಶಿಗಳು.
5. ಸರ್ಕಾರದ ಉಪ ಕಾರ್ಯದರ್ಶಿ (ಆರ್ಥಿಕ ಆಯೋಗ ಕೋಶ), 4ನೇ ಮಹಡಿ, 4ನೇ ಹಂತ, ಬಹುಮಹಡಿ ಕಟ್ಟಡ, ರವರ ಆಪ್ತ ಸಹಾಯಕರು.
6. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಸಹಾಯಕರು.
7. ನಿರ್ದೇಶಕರು (ಪಂ.ರಾಜ್-1&2) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಸಹಾಯಕರು.